ಕರ್ನಾಟಕ ವಿಧಾನ ಸಭೆ

ಬುಧವಾರ, ದಿನಾಂಕ ೨೬ನೇ ಸೆಪ್ಟೆಂಬರ್ ೧೯೮೬

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆಯವರ ಲಾಟರಿ ಯೋಜನೆ

೪೧ (೧೧೬) ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯು ಮಹಾಪೌರರು ಒಂದು ಲಾಟರಿ ಯೋಜನೆ ನಡೆಸಿದ್ದಾರೆ ಎನ್ನುವುದು ನಿಜವೇ ?

ಆ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯು ಈ ಯೋಜನೆಯ ಬಗ್ಗೆ ಯಾವುದೇ ತರಾವನ್ನು ಹೊರಡಿಸಿದೆಯೇ ?

ಇ) ಹಾಗಿದ್ದರೆ, ಸರ್ಕಾರವು ಪ್ರಸ್ತುತ ಯೋಜನೆಗೆ ಮಂಜೂರಾತಿ ನೀಡಿದೆಯೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಮೂರ್ತಿ ಸ್ಥಾಪನಾ ಸಮಿತಿ ಹುಬ್ಬಳ್ಳಿ. ಇವರು ಲಾಟರಿ ಯೋಜನೆಯನ್ನು ಕೈಗೊಳ್ಳುವ ಉದ್ದೇಶವಿದ್ದಿತು.

ಆ) ಇಲ್ಲ.

ಇ) (ಅ)ಗೆ ನೀಡಿರುವ ಉತ್ತರದಂತೆ: ಉದ್ಭವಿಸುವುದಿಲ್ಲ.

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಳಿ ಧಾರವಾಡ ಮಹಾನಗರಸಭೆಯ ಮಹಾಪೌರರು ಲಾಟರಿ ಯೋಜನೆಯನ್ನು ತಂದು ಅದರಲ್ಲಿ ತಮ್ಮ ಸಹಿಯನ್ನು ಕೂಡ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಬೇರೆ ಯಾವ ಕಮಿಟಿಯೂ ಇಲ್ಲ ಮಹಾಪೌರರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಇಂಥ ಒಂದು ಲಾಟರಿ ಯೋಜನೆಯನ್ನು ತಂದು, ಟಿಕೇಟ್‌ಗಳನ್ನು ಕೂಡ ಪ್ರಿಂಟ್ ಮಾಡಿಸಿದ್ದಾರೆ. ಆಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ತಡೆಯಾಜ್ಞೆ ಕೊಟ್ಟಿರುವುದಕ್ಕೆ ಕಾರಣವೇನು ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಲಾಟರಿ ಯೋಜನೆ ಬಗ್ಗೆ ನಗರ ಪಾಲಿಕೆ ಪತಿಯಿಂದ ತೀರ್ಮಾನ ತೆಗೆದುಕೊಂಡಿಲ್ಲ. ಅವರು ಒಂದು ಸಮಿತಿಯನ್ನು ಮಾಡಿಕೊಂಡು ಹಣ ಶೇಖರಣೆಗೊಸ್ಕರ ಲಾಟರಿ ಟಿಕೇಟ್ ಮಹಾಂತರ ಏರ್ಪಾಡು ಮಾಡಿದ್ದು ಉಂಟು. ಈ ವಿಚಾರದಲ್ಲಿ ಸರ್ಕಾರಕ್ಕೆ ಕೆಲವು ದೂರುಗಳು ಬಂದಮೇಲೆ ದಿನಾಂಕ: ೨೦-೬-೮೬ರಲ್ಲಿ ಆದೇಶ ಕಳುಹಿಸಿ, ಲಾಟರಿ, ಯೋಜನೆಯನ್ನು ತಿರಸ್ಕರಿಸಲಾಗಿದೆಯೆಂದು ತಿಳಿಸಿದ್ದೇವೆ. ಈ ರೀತಿ ತಿಳಿವಳಿಕೆ ಕೊಟ್ಟಮೇಲೂ ಕೆಲವು ದೂರುಗಳು ಬಂದವು. ನಮ್ಮ ಮಾಹಿತಿ ಪ್ರಕಾರ ಟಿಕೇಟ್‌ಗಳನ್ನು ಪ್ರಿಂಟ್ ಮಾಡಿಸಿದ್ದಾರೆ, ಮಾರಾಟ ಮಾಡಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಲಾಟರಿ ಯೋಜನೆ ವಿಚಾರದಲ್ಲಿ ಯಾವುದೇ ಆಜ್ಞೆ ಕೊಡಿ. ಆದರೆ, ಕಿತ್ತೂರು ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ನಿಮ್ಮ ಆಜ್ಞೆ ಗಂಟು ಬಿದ್ದಿರುವುದು ಉತ್ತರ ಕರ್ನಾಟಕದ ಜನತೆಯಲ್ಲಿ ಕ್ಷೋಭೆ ಉಂಟು ಮಾಡಿದೆ. ಈ ರೀತಿ ತಡೆಯಾಜ್ಞೆ ಕೊಡುವುದಕ್ಕೆ ಯಾರಾದರೂ ಮಂತ್ರಿಗಳ ಕೈವಾಡ ಇದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ರಾಣಿ ಕಿತ್ತೂರು ಚೆನ್ನಮ್ಮನವರ ಪುತ್ಥಳಿಯನ್ನು ಸ್ಥಾಪಿಸುವುದಕ್ಕೆ ನಾವೆಲ್ಲಾ ಪೂರ್ಣ ಸಹಕಾರವನ್ನು ಕೊಡುತ್ತೇವೆ. ಸ್ಥಳೀಯವಾಗಿ ಎಲ್ಲಿ ಅವನ್ನು ಸ್ಥಾಪನೆ ಮಾಡಬೇಕೆಂದು ಒಂದು ಪ್ರಶ್ನೆ ಬಂದಿದೆ. ಕಿತ್ತೂರು ರಾಣಿ ಚೆನ್ನಮ್ಮನ ವೃತ್ತದಲ್ಲಿಡಬೇಕೆಂದು ಮೊದಲು ತೀರ್ಮಾನ ಮಾಡಿದ್ದೆವು. ಕಾರಣಾಂತರದಿಂದ ಅಲ್ಲಿ ಏನಾಗಿದೆ ಅಂದರೆ ಟ್ರಾಫಿಕ್ ಜಾಸ್ತಿ ಇರುವ ಕಾರಣ, ವಾಹನಗಳ ಒತ್ತಡ ಇರುವ ಕಾರಣ, ಟ್ರಾಫಿಕ್ ಲೈಟ್ ಬರುವುದರಿಂದ, ಪೋಲಿಸ್ ಇಲಾಖೆಯವರು ಅಲ್ಲಿ ಪುತ್ಥಳಿ ಇಡುವುದು ಸರಿಯಲ್ಲ ಎಂದು ಪರಿಶೀಲನೆಯನ್ನು ಕೊಟ್ಟಿರುವುದರಿಂದ ಆ ಸ್ಥಳ ಬದಲಾವಣೆ ಮಾಡಬೇಕೆಂದು ಏನು ಕ್ರಮ ತೆಗೆದುಕೊಂಡಿದ್ದೇವೆ, ಅದರ ಬಗ್ಗೆ ಕೆಲವು ಸ್ಥಳೀಯರು ಸ್ಥಳ ಬದಲಾವಣೆ ಮಾಡಬಾರದು ಇರತಕ್ಕ ಸ್ಥಳದಲ್ಲಿಯೇ ಪುತ್ಥಳಿ ಇಡಬೇಕೆಂದು ಇರುವುದರಿಂದ ಅದರ ಬಗ್ಗೆ ಪೂರ್ಣವಾಗಿ ವಿಚಾರಣೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಮುಂದೂಡಿದ್ದೇವೆ ಅಷ್ಟೇ ಹೊರತು ಅದನ್ನು ರದ್ದು ಮಾಡಿಲ್ಲ.

ಶ್ರೀ ಬಿ.ಎಂ. ಹಿಂಡಸಗೇರಿ.—ಕಿತ್ತೂರು ರಾಣಿ ಚೆನ್ನಮ್ಮನವರ ಪುತ್ಥಳಿಯನ್ನು ಸ್ಥಾಪನೆ ಮಾಡುವ ಬಗ್ಗೆ ಈಗಾಗಲೇ ೫೦ ಸಾವಿರ ರೂಪಾಯಿ ಖರ್ಚು ಮಾಡಿ ೧೦ ಅಡಿ ಆಳದವರೆಗೆ ಒಂದು ಬೆಡ್ ಹಾಕಲಾಗಿದೆ. ಅದರ ಸ್ಥಾಪನೆಗೋಸ್ಕರ ಲಾಟರಿ ಯೋಜನೆಯನ್ನು ಕೈಗೊಂಡು ಸಾಕಷ್ಟು ಲಾಟರಿ ಟಿಕೆಟ್ ಮಾರಲಾಗಿದೆ. ಕರ್ನಾಟಕ ಸ್ಪೆಷಲ್ ಲಾಟರಿ ಆಕ್ಟ್ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ೫೦ ಸಾವಿರ ರೂಪಾಯಿ ಖರ್ಚು ಮಾಡಿ ಈ ಪುತ್ಥಳಿಯನ್ನು ಸ್ಥಾಪನೆ ಮಾಡಲಿಕ್ಕೆ ೧೦ ಅಡಿಯವರೆಗೆ ಆಳ ಮಾಡಿ ಒಂದು ಬೆಡ್ ಕೂಡ ತಯಾರಿಸಲಾಗಿದೆ. ಈ ಬಗ್ಗೆ ಲಾಟರಿ ಯೋಜನೆಯಿಂದ ಸಾಕಷ್ಟು ಲಾಟರಿ ಟಿಕೆಟ್‌ಗಳನ್ನು ಮಾರಲಾಗಿದ್ದರೂ ಕಾಯಿದೆ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ, ಸಾರ್ವಜನಿಕರು ಯಾರಾದರೂ ಮಾಡಿದರೆ ಅವರ ಮೇಲೆ ಕೇಸ್ ಹಾಕುವಂತಾದ್ದು ಇರುವಾಗ, ಇವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂತಾದ್ದು ಸತ್ಯಕ್ಕೆ ದೂರವಾದುದು. ಲಾಟರಿ ಟಿಕೆಟ್ ಯೋಜನೆಯನ್ನು ಮುಂದುವರಿಸಬಾರದು ಎಂದು ನಾವು ಹೇಳಿದ್ದೇವೆ. ಮಾನ್ಯ ಸದಸ್ಯರು ಕಾಯಿದೆ ಉಲ್ಲಂಘನೆಯಾಗಿದೆ. ಕಾಯಿದೆ ಪ್ರಕಾರ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ಕಾಯಿದೆ ಉಲ್ಲಂಘನೆಯಾಗಿದ್ದರೆ ಕ್ರಮವನ್ನು ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ. ಇನ್ನು ಪುತ್ಥಳಿಯ ಬಗ್ಗೆ ಸ್ಥಳದಲ್ಲಿರತಕ್ಕೆ ನಾಗರೀಕರು ಯಾವ ಸ್ಥಳದಲ್ಲಿ ಸ್ಥಾಪನೆ ಮಾಡಬೇಕೆಂದು ಅಭಿಪ್ರಾಯ ಪಡುತ್ತಾರೋ ಅಲ್ಲಿ ಸ್ಥಾಪನೆ ಮಾಡುತ್ತೇವೆ.

ಶ್ರೀನಿವಾಸಪುರ ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯಿತಿಗಳ ಹಣಕಾಸುಸ್ಥಿತಿ

೬೨. (೧೪೪) ಶ್ರೀ ರಮೇಶ್ ಕುಮಾರ್ (ಶ್ರೀನಿವಾಸ ಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಆಡಳಿತ ಅಧಿಕಾರಿಗಳು ಶ್ರೀನಿವಾಸಪುರ ತಾಲ್ಲೂಕಿನ ಗ್ರಾಮ ಪಂಚಾಯ್ತಿಗಳನ್ನು ವಶಕ್ಕೆ ತೆಗೆದುಕೊಂಡ ದಿನಾಂಕದಿಂದ ಆ ಪಂಚಾಯ್ತಿಗಳ ವಶಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ?

ಆ) ಈ ಪಂಚಾಯ್ತಿಗಳನ್ನು ಮಂಡಲ ಪಂಚಾಯಿತಿಗಳ ಅಡಿಯಲ್ಲಿ ತಂದ ನಂತರ ಅವುಗಳ ಆರ್ಥಿಕ ಪರಿಸ್ಥಿತಿ.

ಇ) ವಿವಿಧ ಗ್ರಾಮ ಪಂಚಾಯಿತಿಗಳ ಆಡಳಿತ ಅಧಿಕಾರಿಗಳು ಗ್ರಾಮ ಪಂಚಾಯ್ತಿಗಳು ಮಂಡಲ ಪಂಚಾಯ್ತಿಗಳಾಗಿ ಪರಿವರ್ತನೆ ಹೊಂದಿ ಅವುಗಳ ಚುನಾಯಿತ ಸದಸ್ಯರು ಅಧಿಕಾರವನ್ನು ವಹಿಸಿಕೊಳ್ಳುವ ಮಧ್ಯಂತರ ಅವಧಿಯಲ್ಲಿ ಈ ಪಂಚಾಯ್ತಿಗಳ ಎಲ್ಲಾ ಹಣವನ್ನು ವಾಸ್ತವವಾಗಿ ಹೀರುಗೊಳಿಸಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?